## ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **202** |
| ಉತ್ತರಿಸಬೇಕಾದ ದಿನಾಂಕ | : | 09.12.2020 |
| ಉತ್ತರಿಸಬೇಕಾದ ಸಚಿವರು | : | ವಸತಿ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಹುಡ್ಕೋದಿಂದ ಸಾಲ ಪಡೆದು ವಸತಿ ರಹಿತರಿಗೆ ವಸತಿ ನೀಡಿದ ಗ್ರಾಮ ಪಂಚಾಯಿತಿಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ನಿರ್ಮಿಸಲಾದ ಮನೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು, ತಾಲ್ಲೂಕುವಾರು, ವರ್ಷಾವಾರು, ಗ್ರಾಮ ಪಂಚಾಯತಿವಾರು ಮಾಹಿತಿ ಒದಗಿಸುವುದು) | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳನ್ನೊಳಗೊಂಡಂತೆ ಕಲಬುರಗಿ ಜಿಲ್ಲೆಯಲ್ಲಿ ಒಟ್ಟು 45643 ಫಲಾನುಭವಿಗಳಿಗೆ ಹಾಗೂ ಯಾದಗಿರಿ ಜಿಲ್ಲೆಯಲ್ಲಿ ಒಟ್ಟು 24597 ಫಲಾನುಭವಿಗಳಿಗೆ ವಿವಿಧ ಹಣಕಾಸು ಸಂಸ್ಥೆಗಳ ಮೂಲಕ ಹಾಗೂ ಹುಡ್ಕೋದಿಂದ ಸಾಲ ಪಡೆದು ವಿವಿಧ ವಸತಿ ಯೋಜನೆಯಡಿ ಆಯ್ಕೆಯಾದ ವಸತಿ ರಹಿತರಿಗೆ ವಸತಿ ಒದಗಿಸಲು ಸಾಲದ ರೂಪದಲ್ಲಿ ಹಣವನ್ನು ನೀಡಲಾಗಿತ್ತು. |
| ಆ) | ಸರ್ಕಾರದ ಸಾಲ ಮತ್ತು ಬಡ್ಡಿ ಮನ್ನಾ ಯೋಜನೆಯಡಿ ಈ ಮನೆಗಳ ಮೇಲಿನ ಸಾಲ ಮತ್ತು ಬಡ್ಡಿ ಮನ್ನಾ ಮಾಡಲಾಗಿದೆಯೇ? (ವಿವರ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ :ವಇ 31 ಹೆಚ್‌ಎಹೆಚ್ 2013, ದಿನಾಂಕ :03.09.2014 ರಲ್ಲಿ ಆಶ್ರಯ ಯೋಜನೆ ಹಾಗೂ ಮತ್ತಿತರ ಎಲ್ಲಾ ವಸತಿ ಯೋಜನೆಗಳಡಿ ನೀಡಲಾದ ಸಾಲವನ್ನು ಮನ್ನಾ ಮಾಡಲಾಗಿರುತ್ತದೆ.<br><br>ಸಾಲ ಮನ್ನಾ ಆಗಿದ್ದು, ಜಿಲ್ಲಾವಾರು ಮಾಹಿತಿ ನೀಡಲಾಗಿದೆ. ಗ್ರಾಮ ಪಂಚಾಯ್ತಿವಾರು ಉದ್ಭವಿಸುವುದಿಲ್ಲ. |

ಸಂಖ್ಯೆ :ವಇ 406 ಹೆಚ್‌ಎಎಂ 2020

(ವಿ. ಸೋಮಣ್ಣ)
ವಸತಿ ಸಚಿವರು